ವಿಶ್ವಕಪ್ ಸೆಮಿಫೈನಲ್‌ನಲ್ಲಿ ಭಾರತ ತಂಡ ಪಾಕಿಸ್ತಾನದ ವಿರುದ್ಧ ಪಂದ್ಯ ಗೆದ್ದಿತ್ತು. ಗೆದ್ದ ಬಳಿಕ ದೋನಿ ಬೀಗಲಿಲ್ಲ. ಪತ್ರಿಕಾಗೋಷ್ಠಿಯಲ್ಲಿ, 'ನಾನು ಪಿಚ್ ಅನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದೆ. ಎಕ್ಸ್‌ಟ್ರಾ ಫೇಸ್ ಬೌಲರ್ ಬದಲು ಒಬ್ಬ ಸ್ಪಿನ್ನರ್‌ನನ್ನು ತಂಡಕ್ಕೆ ಸೇರಿಸಿಕೊಳ್ಳಬೇಕಿತ್ತು' ಎಂದು ಮುಲಾಜಿಲ್ಲದೆ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದರು.

ನಾಯಕನಾಗಿ ದೋನಿಯ ಇನ್ನೊಂದು ಗುಣವೆಂದರೆ ಮೈದಾನದಲ್ಲಿಯೇ ತಕ್ಷಣದ ಅಗತ್ಯದ ಮೇಲೆ ನಿರ್ಧಾರಗಳನ್ನು ಕೈಗೊಳ್ಳುವುದು. ಈ ಕ್ಷಿಪ್ರ ನಿರ್ಧಾರಗಳನ್ನು ಕೈಗೊಳ್ಳುವಾಗ ಸೋಲುವ ಎಲ್ಲ ಸಾಧ್ಯತೆಗಳೂ ಇರುತ್ತವೆ. ಆದರೆ ಅದಕ್ಕಾಗಿ ದೋನಿ ಹೆಚ್ಚು ತಲೆಕೆಡಿಸಿಕೊಂಡದ್ದಿಲ್ಲ. ಇಂತಹ ಕ್ಷಿಪ್ರ ನಿರ್ಧಾರಗಳು ಎಷ್ಟೋ ಸಲ ರೋಮಾಂಚಕ ಜಯವನ್ನು ತಂದುಕೊಟ್ಟಿವೆ. ಸೋಲಿನ ಬಾಯಿಗೂ ದೂಡಿವೆ.

2007ರ ಟ್ವೆಂಟಿ20 ವಿಶ್ವಕಪ್ ಫೈನಲ್‌ನ ಸನ್ನಿವೇಶ ಎಲ್ಲ ಕ್ರಿಕೆಟ್‌ಪ್ರಿಯರಿಗೂ ನೆನಪಿದೆ. ಪಾಕಿಸ್ತಾನದ ವಿರುದ್ಧದ ಆ ಪಂದ್ಯದಲ್ಲಿ ಕೊನೆಯ ಓವರ್ ಅತ್ಯಂತ ನಿರ್ಣಾಯಕವಾಗಿತ್ತು. ಎಲ್ಲರಿಗೂ ಅಚ್ಚರಿಯಾಗುವಂತೆ ದೋನಿ ಕೊನೆಯ ಓವರ್‌ಅನ್ನು ಅನನುಭವಿ ಬೌಲರ್ ಜೋಗಿಂದರ್ ಶರ್ಮಾ ಅವರಿಗೆ ಕೊಟ್ಟರು. ಮೈದಾನದಲ್ಲಿ ಮತ್ತು ಟೀವಿಯ ಮುಂದೆ ಕುಳಿತ ಲಕ್ಷಾಂತರ ಪ್ರೇಕ್ಷಕರು ಇದೇನಿದು.. ಎಂದು ಅಚ್ಚರಿ ಪಡುತ್ತಿದ್ದಂತೆಯೇ ಜೋಗಿಂದರ್ ಪಂದ್ಯ ಗೆದ್ದುಕೊಟ್ಟ!

ಇನ್ನೊಮ್ಮೆ ಐಪಿಎಲ್4 ಸರಣಿಯ ಫೈನಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಸೋಲಿನ ಅಂಚಿನಲ್ಲಿತ್ತು, ಚೆನ್ನೈ ತಂಡದ 153 ರನ್‌ಗಳನ್ನು ಸುಲಭವಾಗಿ ತಲುಪಿದ ಕೋಲ್ಕತ್ತಾ ನೈಟ್ ರೈಡರ್ಸ್ ಕೊನೆಯ ಓವರ್‌ನಲ್ಲಿ ಜಯ ಗಳಿಸುವುದು ಖಚಿತ ಎನ್ನುವಂತಿತ್ತು. ಅನುಭವಿ ಸ್ಕಾಟ್ ಸ್ಟೈರಿಸ್‌ಗೆ ಬೌಲಿಂಗ್ ಕೊಡಬಹುದು ಎಂದು ಎಲ್ಲರೂ ಕಾಯುತ್ತಿದ್ದರೆ ದೋನಿ ನೇರವಾಗಿ ಸುರೇಶ್ ರೈನಾ  ಕೈಗೆ ಚೆಂಡಿತ್ತರು! ಆ ಪಂದ್ಯದಲ್ಲೂ ಗೆಲುವು ದೋನಿ ತಂಡದ ಮಡಿಲಿಗೆ ಬಿತ್ತು!

ಇಂತಹ ಅಸಾಧಾರಣ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ದೋನಿ ಹೆಸರುವಾಸಿ. ಆದರೆ ಆಗೊಮ್ಮೆ ಈಗೊಮ್ಮೆ ಈ ನಿರ್ಧಾರಗಳು ಕೈಕೊಟ್ಟದ್ದೂ ಉಂಟು. ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯ ಇದಕ್ಕೊಂದು ಉದಾಹರಣೆ. ಕೊನೆಯ ಓವರ್‌ನಲ್ಲಿ ದಕ್ಷಿಣ ಆಫ್ರಿಕಾಕ್ಕೆ 13 ರನ್‌ಗಳು ಬೇಕಾಗಿದ್ದವು. ಅನುಭವಿ ಹರ್‌ಭಜನ್ ಸಿಂಗ್ ಕೊನೆಯ ಓವರ್ ಹಾಕುತ್ತಾರೆ ಎನ್ನುವುದು ಎಲ್ಲರ ನಿರೀಕ್ಷೆ ಆಗಿತ್ತು. ಆದರೆ ದೋನಿ ವೇಗದ ಬೌಲರ್ ಆಶಿಶ್ ನೆಹ್ರಾಗೆ ಬೌಲಿಂಗ್ ನೀಡಿದರು. ದಕ್ಷಿಣ ಆಫ್ರಿಕಾ ಜಯಭೇರಿ ಬಾರಿಸಿತು.

ನಾಯಕನೊಬ್ಬನಿಗೆ ಇರಬೇಕಾದ ಇನ್ನೂ ಹಲವು ಗುಣಗಳು ದೋನಿಯಲ್ಲಿದ್ದವು. ಹಿರಿಯರಿಗೆ ಗೌರವ ಕೊಡುವುದು ಮತ್ತು ಕಿರಿಯರನ್ನು ಸಮಾನವಾಗಿ ಕಾಣುವುದು. ದೋನಿ ಅವರ ಕೋಣೆ ಎಲ್ಲ ಆಟಗಾರರಿಗೂ ಸದಾ ತೆರೆದ ಬಾಗಿಲು ಹೊಂದಿತ್ತು. ಭಾರತ ಒಂದು ದಿನದ ಪಂದ್ಯಗಳ ಐಸಿಸಿ ವಿಶ್ವಕಪ್ ಗೆದ್ದಾಗ 'ಇದು ಸಚಿನ್ ಕ್ಷಣ' ಎಂದವರು ದೋನಿ. ತಂಡದಲ್ಲಿದ್ದ ಹಿರಿಯ ಆಟಗಾರನನ್ನು ಹೇಗೆ ಗೌರವಿಸಬೇಕು ಎನ್ನುವುದು ದೋನಿಗೆ ಗೊತ್ತಿತ್ತು. ತಂಡದಲ್ಲಿದ್ದಾಗ ಅನಿಲ್ ಕುಂಬ್ಳೆ ಮತ್ತು ಸೌರವ್ ಗಂಗೂಲಿ ಅವರನ್ನೂ ಅಷ್ಟೇ ಗೌರವದಿಂದ ಕ್ಯಾಪ್ಟನ್ ದೋನಿ ನೋಡಿಕೊಂಡಿದ್ದರು. ಗೆಲುವಿನ ಕ್ರೆಡಿಟ್ ತಂಡದ ಎಲ್ಲರಿಗೆ ನೀಡುವುದು ಮತ್ತು ಸೋಲಿನ ಹೊಣೆಯನ್ನು ಮುಲಾಜಿಲ್ಲದೆ ನಾಯಕನಾದ ತಾನೇ ಹೊತ್ತುಕೊಳ್ಳುವುದು ದೋನಿ ಪ್ರದರ್ಶಿಸಿದ ಇನ್ನೊಂದು ಅಪರೂಪದ ಗುಣ.

ಕೆಲವು ಪಂದ್ಯಗಳಲ್ಲಿ ಸೋಲಿನಿಂದ ತಂಡವನ್ನು ಹೊರತರುವ ಜವಾಬ್ದಾರಿಯನ್ನು ನೇರವಾಗಿ ತಾನೇ ಹೊತ್ತುಕೊಂಡದ್ದೂ ಇದೆ. ವಿಶ್ವಕಪ್ ಫೈನಲ್ ಪಂದ್ಯವನ್ನೇ ಗಮನಿಸಿ. ನಂಬರ್ 5ನೇ ಆಟಗಾರನಾಗಿ ಯುವರಾಜ್ ಸಿಂಗ್ ಬ್ಯಾಟಿಂಗ್‌ಗೆ ಬರಬೇಕಿತ್ತು. 6ನೇ ಕ್ರಮಾಂಕದಲ್ಲಿ ಬರಬೇಕಿದ್ದ ದೋನಿಯ ಫಾರ್ಮ್ ಆಗ ತೀರಾ ಹದಗೆಟ್ಟಿತ್ತು. ಅದಕ್ಕಿಂತ ಹಿಂದಿನ ಒಟ್ಟು 21 ಇನಿಂಗ್ಸ್‌ಗಳಲ್ಲಿ ದೋನಿ ಅತ್ಯಧಿಕ ಎಂದರೆ 38 ರನ್ ಮಾತ್ರ ಹೊಡೆದಿದ್ದರು. ಆ ನಿರ್ಣಾಯಕ ಘಳಿಗೆಯಲ್ಲಿ ದೋನಿ ಹಿಂದೆ ಮುಂದೆ ನೋಡದೆ ಐದನೇ ಕ್ರಮಾಂಕದಲ್ಲಿ ಬ್ಯಾಟಿಂಗಿಗೆ ಇಳಿದರು. ಎಲ್ಲರ ನಿರೀಕ್ಷೆಗೆ ವಿರುದ್ಧವಾಗಿ ಅಜೇಯ 91 ರನ್‌ಗಳನ್ನು ಹೊಡೆದರು. ಭಾರತ ಕಪ್ ಗೆದ್ದುಕೊಂಡಿತು.

ವಿಶ್ವಕಪ್ ಸೆಮಿಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ ಪಂದ್ಯ ಗೆದ್ದಿತ್ತು. ಗೆದ್ದ ಬಳಿಕ ದೋನಿ ಬೀಗಲಿಲ್ಲ. ಪತ್ರಿಕಾಗೋಷ್ಠಿಯಲ್ಲಿ, 'ನಾನು ಪಿಚ್ ಅನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದೆ. ಎಕ್ಸ್‌ಟ್ರಾ ಫೇಸ್ ಬೌಲರ್ ಬದಲು ಒಬ್ಬ ಸ್ಪಿನ್ನರ್ ನನ್ನು ತಂಡಕ್ಕೆ ಸೇರಿಸಿಕೊಳ್ಳಬೇಕಿತ್ತು' ಎಂದು ಮುಲಾಜಿಲ್ಲದೆ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದರು.

ನಾಯಕನಾಗಿ ಇಷ್ಟೆಲ್ಲ ಸಾಧನೆಗಳನ್ನು ಮೆರೆದ ದೋನಿ, ಈಗ ಯಾರೂ ಕೇಳದೆ ನಾಯಕತ್ವಕ್ಕೆ ರಾಜೀನಾಮೆ ಕೊಟ್ಟದ್ದು ಏಕೆ ಎನ್ನುವುದೂ ಮಹತ್ವದ ಪ್ರಶ್ನೆ. ಇಲ್ಲೂ ದೋನಿಯ ನಾಯಕತ್ವದ ಶೈಲಿಯೇ ಕೆಲಸ ಮಾಡಿದೆ. ಈಗಾಗಲೆ ವಿರಾಟ್ ಕೊಹ್ಲಿ ಟೆಸ್ಟ್ ತಂಡದ ನಾಯಕತ್ವ ವಹಿಸಿದ್ದಾರೆ. ತಮ್ಮ



ಚಿತ್ರ: ಆರ್.ಶ್ರೀಕಂಠ ಶರ್ಮ